**ಕರ್ನಾಟಕ ಸರ್ಕಾರ**

**(ತೋಟಗಾರಿಕೆ ಇಲಾಖೆ)**

ಸಂ:ತೋಇ:ಜೈ.ಕೇಂದ್ರ:ಹಿಸತೋನಿ(ಸಅ):ವಿನಿ1:23:2017-18

ತೋಟಗಾರಿಕೆ ಆಯುಕ್ತಾಲಯ
ಜೈವಿಕ ಕೇಂದ್ರ, ಹುಳಿಮಾವು,
ಬೆಂಗಳೂರು-76.
ದಿನಾಂಕ:09.10.2017.

## ಅಲ್ಪಾವಧಿ ಟೆಂಡರ ಪ್ರಕಟಣೆ

**ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ದ್ವಿ ಲಕೋಟೆ ವಿಧಾನ**
**ಟೆಂಡರ ಉಲ್ಲೆಖ ಸಂ:ತೋಇ:ಜೈಕೇ:ಹಿಸತೋನಿ(ಸಅ)ವಿನಿ1:23:2017-18 ದಿ:09.10.2017**

ಜೈವಿಕ ಕೇಂದ್ರ, ಹುಳಿಮಾವು, ಬೆಂಗಳೂರು ವತಿಯಿಂದ ಹುಳಿಮಾವು ಜೈವಿಕ ಕೇಂದ್ರ ಅಣಬೆ ಪ್ರಯೋಗಶಾಲೆಗೆ ಅಗತ್ಯವಿರುವ ಉತ್ತಮ ಗುಣಮಟ್ಟದ ಭತ್ತ ಹುಲ್ಲು ಸರಬರಾಜಿಗಾಗಿ ಅಧಿಕೃತ ಸರಬರಾಜುದಾರರು/ ವಿತರಕರು/ ಸಂಸ್ಥೆಗಳಿಂದ ಇ-ಬಿಡ್ಡುಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ | ವಿವರಗಳು | ಅಂದಾಜು ಪ್ರಮಾಣ | ಇ.ಎಮ್ ಡಿ (ರೂ.ಗಳಲ್ಲಿ) |
|---|---|---|---|
| 1 | ಉತ್ತಮ ಗುಣಮಟ್ಟದ ಭತ್ತದ ಹುಲ್ಲು | 20 ಟನ್ | 3,500.00 |

| ಕ್ರ.ಸಂ | ಘಟನಾವಿವರ | ದಿನಾಂಕ ಮತ್ತು ಸಮಯ |
|---|---|---|
| 1 | ಟೆಂಡರ್ ದಾಖಲಾತಿಗಳನ್ನು ಇ-ಪ್ರಕ್ಯೂರ್ ಮೆಂಟ್ ಅಂತರ್ಜಾಲದಿಂದ ಅವರೋಹಿಸಲು(ಡೌನ್ ಲೋಡ್) ಮತ್ತು ಆರೋಹಿಸಲು (ಅಪ್ ಲೋಡ್) ಮಾಡುವ ಅವಧಿ | 09.10.2017 ರಿಂದ 19.10.2017 ರ ಸಂಜೆ 5.00 ಘಂಟೆವರೆಗೆ |
| 2 | ಬಿಡ್ ಪೂರ್ವ (Pre bid) ಸಭೆಯ ದಿನಾಂಕ ಮತ್ತು ಸಮಯ | 13.10.2017, ಬೆಳಿಗ್ಗೆ 11.00 ಘಂಟೆಗೆ |
| 3 | ತಾಂತ್ರಿಕ ಬಿಡ್ಡುಗಳನ್ನು ತೆರಯುವ ದಿನಾಂಕ ಮತ್ತು ಸಮಯ | 23.10.2017 ಬೆಳಿಗ್ಗೆ 11.00 ಘಂಟೆಗೆ |
| 4 | ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ ಮತ್ತು ಸಮಯ | 25.10.2017, ಬೆಳಿಗ್ಗೆ 11.00 ಘಂಟೆಗೆ |
| 5 | ಬಿಡ್ ಪ್ರಕ್ರಿಯೆ ಕಛೇರಿ ವಿಳಾಸ | ತೋಟಗಾರಿಕೆ ಜಂಟಿ ನಿರ್ದೇಶಕರು (ಬಯೋಟೆಕ್ನಾಲಜಿ), ಜೈವಿಕ ಕೇಂದ್ರ, ಹುಳಿಮಾವು, ಬೆಂಗಳೂರು – 76, ಫೋನ್ ಸಂಖ್ಯೆ: 080-26584904, 26582775, 26582784 ಇ-ಮೇಲ್ ವಿಳಾಸ: sadh.co2014@gmail.com |

ಬಿಡ್ ಗೆ ಸಂಬಂಧಿಸಿದ ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹತೆ, ತಾಂತ್ರಿಕ / ಆರ್ಥಿಕ ಬಿಡ್ಡುಗಳ ಮೌಲ್ಯಮಾಪನದ ಮಾನದಂಡಗಳು, ಷರತ್ತು ಮತ್ತು ನಿಬಂಧನೆ, ಇತ್ಯಾದಿ ಹೆಚ್ಚಿನ ವಿವರಗಳನ್ನು https://eproc.karnataka.gov.in ನಲ್ಲಿ ಪಡೆಯಬಹುದಾಗಿದೆ.

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು
(ಸಮನ್ವಯಾಧಿಕಾರಿ)

ಕರ್ನಾಟಕ ಸರ್ಕಾರ

(ತೋಟಗಾರಿಕೆ ಇಲಾಖೆ)

ಸಂ:ತೋಇ:ಜೈ.ಕೇಂದ್ರ:ಹಿಸತೋನಿ(ಸಅ):ವಿನಿ1:23:2017-18

ತೋಟಗಾರಿಕೆ ಆಯುಕ್ತಾಲಯ
ಜೈವಿಕ ಕೇಂದ್ರ, ಹುಳಿಮಾವು,
ಬೆಂಗಳೂರು-76.
ದಿನಾಂಕ:09.10.2017.

## ಅನುಬಂಧ

**ಅಣಬೆ ಪ್ರಯೋಗಶಾಲೆಗೆ ಅಗತ್ಯವಿರುವ ಭತ್ತದ ಹುಲ್ಲನ್ನು ಖರೀದಿಸುವ ಪ್ರಕ್ರಿಯೆಗೆ ಸಂಬಂದಿಸಿದ ಭತ್ತದ ಹುಲ್ಲಿನ ಪ್ರಮಾಣ, ಗುಣಮಟ್ಟ, ಬಿಡ್ಡುದಾರರ ಅರ್ಹತೆಗಳು ಹಾಗೂ ತಾಂತ್ರಿಕ / ಆರ್ಥಿಕ ಆಯ್ಕೆಯ ಮಾನದಂಡಗಳು.**

–0–

**1. ಭತ್ತದ ಹುಲ್ಲಿನ ಅಂದಾಜು ಪ್ರಮಾಣ ಮತ್ತು ಗುಣಮಟ್ಟ**

| ಕ್ರ.ಸಂ | ವಿವರಗಳು | ಅಂದಾಜು ಪ್ರಮಾಣ |
|---|---|---|
| 1 | ಅಂದಾಜು ಪ್ರಮಾಣ | 20 ಟನ್ |
| 2 | ಗುಣಮಟ್ಟ | ಭತ್ತದ ಹುಲ್ಲು ಉತ್ತಮ ಗುಣಮಟ್ಟದ್ದಾಗಿರಬೇಕು, ಸಂಪೂರ್ಣವಾಗಿ ಒಣಗಿದ್ದು, ತೇವಾಂಶ ಇರಕೂಡದು. ಕೀಟಬಾಧೆಯಿಂದ ಮುಕ್ತವಾಗಿರತಕ್ಕದ್ದು. ಯಾವುದೇ ರೀತಿಯ ಕೊಳೆಯುವಿಕೆ/ ಕಳಿಯುವಿಕೆ ಇರಬಾರದು. ಉತ್ತಮ ಸ್ವಾಭಾವಿಕ ಬಣ್ಣ (ಹಳದಿ) ಹೊಂದಿರತಕ್ಕದ್ದು. |
| 3 | ಇ.ಎಮ್ ಡಿ (ರೂ.ಗಳಲ್ಲಿ) | 3,500.00 |

**2. ಬಿಡ್ಡಿನ ಅರ್ಹತೆಯ ವಿವರಗಳು :**

a. ಬಿಡ್ಡುದಾರರು ಉತ್ತಮ ಗುಣಮಟ್ಟದ ಭತ್ತದ ಹುಲ್ಲನ್ನು ಸರಬರಾಜು ಮಾಡಲು ಶಕ್ತರಾಗಿರಬೇಕು.

b. ಬಿಡ್ಡುದಾರರು **e-procurement** ಅಡಿಯಲ್ಲಿ ನೊಂದಾಯಿತರಾಗಿರತಕ್ಕದ್ದು.

c. ಬಿಡ್ಡುದಾರರು ಟೆಂಡರ್ ದಾಖಲಾತಿಗಳನ್ನು ಪಡೆಯಲು ನಿಗದಿ ಪಡಿಸಿರುವ ಅರ್ಜಿ ಶುಲ್ಕ ಮತ್ತು ಇ.ಎಂ.ಡಿ ಮೊತ್ತ ರೂ.3,500/- ಶುಲ್ಕವನ್ನು **e-procurement** ಮುಖಾಂತರ ಪಾವತಿಸಿರತಕ್ಕದ್ದು.

d. ಬಿಡ್ಡುದಾರರು ಕ್ರಮ ಸಂಖ್ಯೆ 3 ರಲ್ಲಿ ನಮೂದಿಸಿರುವ a, b, c ದಾಖಲಾತಿಗಳನ್ನು ಸ್ವಯಂ ದೃಢೀಕರಿಸಿ e-procurement ಮುಖಾಂತರ ಸಲ್ಲಿಸತಕ್ಕದ್ದು.

**3. e-procurement ನಲ್ಲಿ ಕಡ್ಡಾಯವಾಗಿ ಆರೋಹಿಸಬೇಕಾಗಿರುವ ಸ್ವಯಂ ದೃಢೀಕೃತ ದಾಖಲಾತಿಗಳು :**

a. ವಾಣಿಜ್ಯ ಇಲಾಖೆಯಿಂದ ಪಡೆದ ಜಿ.ಎಸ್.ಟಿ ಸರ್ಟಿಫಿಕೇಟ್.

b. 2014-15,2015-16,2016-17ನೇ ಸಾಲುಗಳ ಪೈಕಿ ಕನಿಷ್ಠ ಒಂದು ವರ್ಷ ಆದಾಯ ತೆರಿಗೆ ಭರ್ತಿ ಮಾಡಿದ ಪ್ರಮಾಣ ಪತ್ರ.

e. ಅನುಮೋದನೆಗೊಂಡ ಬಿಡ್ಡುದಾರರಿಗೆ ದಾಸ್ತಾನು ಸರಬರಾಜು ಆದೇಶವನ್ನು 3(c) ಯಲ್ಲಿ ತಿಳಿಸಿರುವ ಇಮೇಲ್ ವಿಳಾಸಕ್ಕೆ ಕಳುಹಿಸಲಾಗುವುದು ಮೂಲ ಪತ್ರವನ್ನು ಬಿಡ್ಡುದಾರರು ಕಛೇರಿಗೆ ಹಾಜರಾಗಿ ಪಡೆಯತಕ್ಕದ್ದು.

f. ಅನುಮೋದನೆಗೊಂಡ ಬಿಡ್ಡುದಾರರು ದಾಸ್ತಾನು ಸರಬರಾಜು ಆದೇಶ ನೀಡಿದ 7 (ಏಳು ದಿನಗಳ ಒಳಗಾಗಿ ದಾಸ್ತಾನು ಸರಬರಾಜು ಮಾಡತಕ್ಕದ್ದು). ಸಮಯ ಪಾಲನೆ ಮಾಡುವುದು ಅತ್ಯವಶ್ಯ.

g. L1 ಬಿಡ್ಡುದಾರರರು ದಾಸ್ತಾನು ಸರಬರಾಜು ಮಾಡುವಲ್ಲಿ ವಿಫಲರಾದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

h. ಯಾವುದೇ ಸೂಚನೆ / ಕಾರಣ ನೀಡದೆ ಟೆಂಡರ್ ಅನುಮೋದಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಟೆಂಡರ್ ಕರೆಯುವ ಪ್ರಾಧಿಕಾರಿಗೆ /ಅಧಿಕಾರಿಗೆ ಕಾಯ್ದಿರಿಸಲಾಗಿದೆ.

i. ಟೆಂಡರ್ ಪ್ರಕಟಣೆಗೊಂಡ ನಂತರ ಟೆಂಡರ್ ಅವಧಿಯನ್ನು ಮುಂದೂಡುವ ಅಥವಾ ಟೆಂಡರ್‌ರದ್ದು ಪಡಿಸುವ ಹಕ್ಕನ್ನು ಟೆಂಡರ್ ಕರೆಯುವ ಪ್ರಾಧಿಕಾರಿಗೆ /ಅಧಿಕಾರಿಗೆ ಕಾಯ್ದಿರಿಸಲಾಗಿದೆ.

j. ಟೆಂಡರ್ ಅನುಮೋದನೆಗೊಂಡ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಈ ಟೆಂಡರ್ ಜಾರಿಯಲ್ಲಿರುತ್ತದೆ.

k. ಅಪೂರ್ಣ ಮಾಹಿತಿಯುಳ್ಳ ಬಿಡ್ಡುದಾರರನ್ನು ಕಾರಣ ನೀಡದೆ ತಿಸ್ಕರಿಸಲಾಗುವುದು.

l. ಸರ್ಕಾರ ವಿಧಿಸುವ ಎಲ್ಲಾ ಬಗೆಯ ತೆರಿಗೆಗಳಿಗೆ ಬಿಡ್ಡುದಾರರೇ ಜವಾಬ್ದಾರರಾಗಿರುತ್ತಾರೆ. ಪ್ರತ್ಯೇಕವಾಗಿ ತೆರಿಗೆಯನ್ನು ಪಾವತಿಸಲಾಗುವುದಿಲ್ಲಾ.

m. ಅನುಮೋದಿತ ಬಿಡ್ಡುದಾರರ ಸಾಲದ ಬಿಲ್ಲಿನ ಒಟ್ಟು ಮೊತ್ತದಲ್ಲಿ ಚಾಲ್ತಿಯಲ್ಲಿರುವ ಆದಾಯ ತೆರಿಗೆಯನ್ನು ಕಟಾವು ಮಾಡಲಾಗುವುದು ಮತ್ತು ಕಟಾವು ಮಾಡಲಾದ ಮೊತ್ತಕ್ಕೆ TDS ದೃಢೀಕರಣ ಪತ್ರ ನೀಡಲಾಗುವುದು.

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು
(ಸಮನ್ವಯಾಧಿಕಾರಿ)